

بِسۡمِ اللّٰہِ الرَّحۡمٰنِ الرَّحِیۡمِ

# ನಮಾಝ್ – ನಮ್ಮ ಪ್ರಥಮ ಕರ್ತವ್ಯ. ಅದರ ಕಡೆಗೆ ಗಮನ ಹರಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 20-01-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಮುಸಲ್ಮಾನರ ಮೇಲೆ ನಮಾಝ್ ಒಂದು ಕಡ್ಡಾಯ ಕರ್ಮ(ಫರ್ಝ್) ಆಗಿದೆ ಎಂದು ನಮ್ಮ ಪೈಕಿ ತಿಳಿಯದವರು ಯಾರಿದ್ದಾರೆ? ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ವಿವಿಧ ಸ್ಥಳಗಳಲ್ಲಿ ನಮಾಝ್ ಅನುಷ್ಠಿಸಬೇಕಾದುದರ ಮಹತ್ವದ ಬಗ್ಗೆ ವಿವಿಧ ಸಂದರ್ಭಗಳಲ್ಲಿ ವಿವರಿಸಿ ಅದರ ಕಡೆಗೆ ನಮ್ಮ ಶ್ರದ್ಧೆಯನ್ನು ಸೆಳೆದಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಹೇಳಿದ್ದಾರೆ– ನಮಾಝ್ ಇಬಾದತ್‌ಗಳ (ಆರಾಧನೆಗಳ) ತಿರುಳು ಎಂದು. ನಮಾಝನ್ನು ಬಿಟ್ಟು ಬಿಡುವುದು ಮನುಷ್ಯನನ್ನು ಕುಫ್ರ್‌ಗೆ(ಅವಿಶ್ವಾಸಕ್ಕೆ) ಮತ್ತು ಶಿರ್ಕ್‌ಗೆ(ಬಹುದೇವಾರಾಧನೆಗೆ) ಸಮೀಪಗೊಳ್ಳುವಂತೆ ಮಾಡುತ್ತವೆ ಎಂದು ಸಹ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ. ಖಿಯಾಮತ್ ದಿನದಂದು ಜನರ ಕರ್ಮಗಳ ಲೆಕ್ಕಾಚಾರ ನಡೆಸುವಾಗ ಎಲ್ಲದಕ್ಕಿಂತಲೂ ಮೊದಲು ನಮಾಝ್ ಅನುಷ್ಠಾನದ ಬಗ್ಗೆ ಲೆಕ್ಕ ಪರಿಶೋಧನೆ ನಡೆಸಲಾಗುವುದು ಎಂದೂ ಹೇಳಲಾಗಿದೆ.

ಮಕ್ಕಳು ನಮಾಝ್ ಅನುಷ್ಠಿಸುವಂತೆ ತಂದೆ ತಾಯಂದಿರು ಅವರನ್ನು ಮಾಡಬೇಕೆಂದು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಮಕ್ಕಳು ಏಳು ವರ್ಷದವರಾಗುವಾಗ ಅವರಿಗೆ ನಮಾಝ್ ಅನುಷ್ಠಿಸಲು ಒತ್ತಿ ಹೇಳಬೇಕು. ಮಕ್ಕಳು ಹತ್ತು ವರ್ಷ ಪ್ರಾಯದವರಾಗುವಾಗ ಅವರನ್ನು ನಮಾಝ್ ಅನುಷ್ಠಿಸುವಂತೆ ಮಾಡಲು, ಬೇಕಾಗಿ ಬಂದರೆ ಅವರೊಂದಿಗೆ ಕಠಿಣವಾಗಿ ವರ್ತಿಸಬೇಕೆಂದು ಸಹ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ. ಆದರೆ ತಂದೆ ತಾಯಂದಿರು ಸ್ವತಃ ನಮಾಝ್ ಅನುಷ್ಠಿಸುವ ಬಗ್ಗೆ ಬದ್ಧತೆ ಹೊಂದಿಲ್ಲವಾದರೆ ಅವರು ತಮ್ಮ ಮಕ್ಕಳಿಗೆ ಅದರ ಬಗ್ಗೆ ಹೇಳಲು ಹೇಗೆ ತಾನೆ ಸಾಧ್ಯ? ಮಕ್ಕಳು ತಮ್ಮ ಸಭೆಗಳಲ್ಲಿ ಮತ್ತು ವಿವಿಧ ಮಾರ್ಗಗಳ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಉಪದೇಶ ಆಲಿಸಿದರೂ ಅವರು ತಮ್ಮ ಮನೆಗಳಲ್ಲಿ ತಮ್ಮ ತಂದೆ ನಮಾಝ್ ಅನುಷ್ಠಿಸುವ ಬಗ್ಗೆ ಬದ್ಧರಾಗಿರುವುದಾಗಿ ಕಾಣದಿದ್ದರೆ ಅವರ ಮೇಲೆ ಆ ಉಪದೇಶದ ಪ್ರಭಾವ ಹೇಗೆ ತಾನೆ ಬೀರಲು ಸಾಧ್ಯ? ಇಂತಹ ತಂದೆಯಂದಿರ ಮಕ್ಕಳು ಖಂಡಿತವಾಗಿಯೂ ಯೋಚಿಸುವರು– ಈ ಆಜ್ಞೆಗೆ ಯಾವ ಮಹತ್ವವೂ ಇಲ್ಲ ಎಂದು. ಲೌಕಿಕವಾದ ಆಶಾಭಿಲಾಷೆಗಳನ್ನು ಈಡೇರಿಸಲು ಮತ್ತು ಮಕ್ಕಳ ಲೌಕಿಕ ಅಭಿವೃದ್ಧಿಯ ಬಗ್ಗೆ ತಂದೆ ತಾಯಂದಿರು ಬಹಳ ಚಿಂತೆಯನ್ನು ಪ್ರಕಟಿಸುತ್ತಾ ಇರುತ್ತಾರೆ. ಆದರೆ ಮುಖ್ಯವಾಗಿ ಚಿಂತಿಸಬೇಕಾದ ವಿಷಯದ ಬಗ್ಗೆ ಅವರಿಗೆ ಲಕ್ಷ್ಯವೇ ಇರುವುದಿಲ್ಲ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಒಬ್ಬನ ಮನೆಬಾಗಿಲ ಸಮೀಪ ನೀರು ತುಂಬಿದ ಕಾಲುವೆ ಹರಿಯುತ್ತಿರುವಾಗ ಅವನು ಅದರ ನೀರಿನಲ್ಲಿ ಪ್ರತಿದಿನ ಐದು ಬಾರಿ ಸ್ನಾನ ಮಾಡುತ್ತಾ ಇದ್ದರೆ ಅವನ ಶರೀರದಲ್ಲಿ ಯಾವುದಾದರೂ ಕೊಳೆ ಬಾಕಿಯಾಗಿ ಉಳಿಯುವುದೇ? ಸಹಾಬರು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ಖಂಡಿತವಾಗಿಯೂ ಅಂತಹ ವ್ಯಕ್ತಿಯ ಶರೀರದಲ್ಲಿ ಕೊಳೆ ಬಾಕಿಯಾಗಿ ಇರಲಾರದು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಐದು ಹೊತ್ತಿನ ನಮಾಝ್‌ಗಳು ಹೀಗೆಯೇ ಇದೆ. ಅಲ್ಲಾಹನು ಅವುಗಳ ಮೂಲಕ ಪಾಪವನ್ನು ಕ್ಷಮಿಸುತ್ತಾನೆ. ಬಲಹೀನತೆಗಳನ್ನು ದೂರ ಸರಿಸುತ್ತಾನೆ. ಐದು ಹೊತ್ತಿನ ನಮಾಝ್ ಅನುಷ್ಠಿಸುವವನ ಆತ್ಮದ ಮೇಲೆ ಯಾವ ಕೊಳೆಯೂ ಬಾಕಿಯಾಗಿ ಇರಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝಿನ ಮಹತ್ವವನ್ನು ಈ ರೀತಿಯಾಗಿ, ಸುಂದರ ಉದಾಹರಣೆ ಮೂಲಕ ವಿವರಿಸಿದ್ದಾರೆ. ಅವರು ಹೀಗೆಯೂ ಹೇಳಿದ್ದಾರೆ: ಒಬ್ಬನು ತನ್ನ ಮನೆಯಲ್ಲಿ ವುಝು ಮಾಡಿ ಅಲ್ಲಾಹನ ಮನೆಯಾದ ಮಸ್‌ಜಿದ್ ಕಡೆಗೆ ಹೋಗಿ ಅಲ್ಲಿ ಫರ್ಝ್ ನಮಾಝ್‌ಗಳನ್ನು ಅನುಷ್ಠಿಸುವುದಾದರೆ, ಅವನು ಮಸ್‌ಜಿದ್‌ಗೆ ಹೋಗುವಾಗ ಎಷ್ಟು ಹೆಜ್ಜೆ ಹಾಕುತ್ತಾನೋ ಅವುಗಳಲ್ಲಿ ಒಂದು ಹೆಜ್ಜೆ ಹಾಕುವಾಗ ಅವನ ಒಂದು ಪಾಪ ಕ್ಷಮಿಸಲ್ಪಡುತ್ತದೆ; ಅವನ ಇನ್ನೊಂದು ಹೆಜ್ಜೆಗೆ ಅವನ ಆಧ್ಯಾತ್ಮಿಕ ಪದವಿ ಒಂದು ಹಂತ ಮೇಲೇರುವುದು. ಎಂದರೆ ಅವನ ಪ್ರತಿಯೊಂದು ಹೆಜ್ಜೆ ಹಾಕುವಿಕೆ ಅವನಿಗೆ ಪುಣ್ಯದಾಯಕವಾಗುವುದು.

ಒಂದು ಸಂದರ್ಭದಲ್ಲಿ ಬಾಜಮಾಅತ್ ನಮಾಝ್ ಅನುಷ್ಠಿಸುವ ಮಹತ್ವದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಅಲ್ಲಾಹನು ಪಾಪಗಳನ್ನು ಹೇಗೆ ಅಳಿಸಿ ಬಿಡುತ್ತಾನೆ ಮತ್ತು ಆಧ್ಯಾತ್ಮಿಕ ಪದವಿ ಹೇಗೆ ಉನ್ನತಗೊಳಿಸುತ್ತಾನೆ ಎಂಬುದರ ಬಗ್ಗೆ ನಾನು ನಿಮಗೆ ವಿವರಿಸಿ ಕೊಡಲೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಅಲ್ಲಾಹನ ಸಂಪ್ರೀತಿ ಪಡೆಯಲು ಹೇಗೆ ಪ್ರಯತ್ನಿಸಬೇಕು, ಅದನ್ನು ಗಳಿಸಲು ಮಾರ್ಗಗಳೇನು ಎಂದು ತಿಳಿಯಲು ಪ್ರಯತ್ನಿಸುತ್ತಾ ಇದ್ದರು. ಅಲ್ಲಾಹನ ಸಾಮೀಪ್ಯ ಗಳಿಸುವುದು ಹೇಗೆ, ಪಾಪಗಳಿಂದ ದೂರಸರಿಯುವುದು ಹೇಗೆ, ಎಂದೆಲ್ಲಾ

ತಿಳಿಯಲು ಅವರು ಸದಾ ಉತ್ಸುಕರಾಗಿರುತ್ತಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನೀವು ನಮಗೆ ಅವುಗಳ ಬಗ್ಗೆ ವಿವರಿಸಿಕೊಡಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮ್ಮ ಮನಸ್ಸು ಇಷ್ಟಪಡದೆ ಇರುವ ವೇಳೆಯಲ್ಲೂ ನೀವು ಚೆನ್ನಾಗಿ ವುಝು ಮಾಡಿಕೊಂಡು, ಮಸ್‌ಜಿದ್‌ಗೆ ದೂರ ಸ್ಥಳದಿಂದ ನಡೆದು ಬಂದು, ಒಂದು ನಮಾಝ್ ಅನುಷ್ಠಿಸಿದರೆ ಹಾಗೂ ಮುಂದಿನ ನಮಾಝ್‌ಗೋಸ್ಕರ ಕಾಯುತ್ತಾ ಇದ್ದರೆ ಅದು ನಿಮ್ಮನ್ನು ಪಾಪಗಳಿಂದ ದೂರ ಸರಿಸುವುದು. ಇಷ್ಟು ಮಾತ್ರವಲ್ಲ ಇದೊಂದು ರೀತಿಯ **ರಿಬಾಥ್** ಸಹ ಆಗಿದೆ. ಎಂದರೆ ದೇಶದ ಗಡಿಪ್ರದೇಶಗಳಲ್ಲಿ ಕಾವಲು ಠಾಣೆಗಳನ್ನು ಸ್ಥಾಪಿಸುವುದರ ಹಾಗಿದೆ. ದೇಶವನ್ನು ಸಂರಕ್ಷಿಸಲು ಗಡಿ ಪ್ರದೇಶದಲ್ಲಿ ಕಾವಲು ಠಾಣೆಗಳನ್ನು ನಿರ್ಮಿಸುತ್ತಾರೆ ಮತ್ತು ಸೈನ್ಯ ಇರಿಸುತ್ತಾರೆ. ಇದೇ ರೀತಿ ಬಾಜಮಾಅತ್ ನಮಾಝ್ ಆಗಿದೆ. ಒಬ್ಬನೇ ನಮಾಝ್ ಅನುಷ್ಠಿಸುವುದಕ್ಕಿಂತ 27 ಪಟ್ಟು ಹೆಚ್ಚು ಪುಣ್ಯ ಬಾಜಮಾಅತ್ ನಮಾಝ್‌ನಿಂದ ಲಭಿಸುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಾಜಮಾಅತ್ ನಮಾಝ್ ಅನುಷ್ಠಿಸುವ ಮಹತ್ವದ ಬಗ್ಗೆ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಬಾಜಮಾಅತ್ ನಮಾಝ್ ಅನುಷ್ಠಿಸುವುದರಲ್ಲಿ ಹೆಚ್ಚು ಪುಣ್ಯ ಇರಿಸಿದ ಉದ್ದೇಶವೇನೆಂದರೆ, ಅದರ ಮೂಲಕ ಐಕ್ಯತೆ ಸ್ಥಾಪಿಸಲ್ಪಡುತ್ತದೆ. ಐಕ್ಯತೆಯನ್ನು ಕ್ರಿಯಾತ್ಮಕವಾಗಿ ಸ್ಥಾಪಿಸಲು ಹೀಗೆ ನಿರ್ದೇಶಿಸಲಾಗಿದೆ: ಪಾದಗಳು ಸಮತಲದಲ್ಲಿರಬೇಕು, ಸಾಲುಗಳು ನೇರವಾಗಿರಬೇಕು ಮತ್ತು ಒಬ್ಬರನ್ನೊಬ್ಬರು ತಾಗಿಕೊಂಡು ನಿಲ್ಲಬೇಕು, ಎಲ್ಲರೂ ಸೇರಿ ಒಬ್ಬ ವ್ಯಕ್ತಿಯಂತಾಗಬೇಕು ಎಂದು ಹೇಳಲಾಗಿದೆ. ಮನುಷ್ಯನಿಗೆ ಒಬ್ಬನು ಇನ್ನೊಬ್ಬನ ಪ್ರಕಾಶವನ್ನು ಹೀರುವ ಶಕ್ತಿಯನ್ನು ದಯಪಾಲಿಸಲಾಗಿದೆ ಎಂಬುದನ್ನು ನೀವು ಮರೆಯಬಾರದು.

ನಾವು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಐಕ್ಯತೆಯನ್ನು ಸ್ಥಾಪಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಗುಲಾಮನಾಗಿರುವ ಮಹ್‌ದಿ ಮಸೀಹ್‌ರನ್ನು ನಂಬಿರುವೆವು ಎಂದು ನಾವು ಒಂದು ಕಡೆಯಿಂದ ವಾದಿಸುತ್ತಾ ಇದ್ದೇವೆ. ಇನ್ನೊಂದು ಕಡೆ ನಮ್ಮ ಅನುಷ್ಠಾನ ಕರ್ಮಗಳಲ್ಲಿ, ವಿಶಿಷ್ಟವಾಗಿ ಇಸ್ಲಾಮಿನ ಮೂಲಭೂತ ಆಜ್ಞೆಗಳನ್ನು ಪಾಲಿಸುವುದರಲ್ಲಿ ಬಲಹೀನರಾಗಿದ್ದರೆ, ನಮ್ಮ ಮೂಲಭೂತ ಕಡ್ಡಾಯ ಕರ್ತವ್ಯ ನಿರ್ವಹಿಸುವುದರಲ್ಲಿ ನಾವು ಬಲಹೀನರಾಗಿದ್ದರೆ, ನಮ್ಮ ಸೃಷ್ಟಿಯ ಉದ್ದೇಶಲಕ್ಷ್ಯವನ್ನು ಈಡೇರಿಸುವುದರಲ್ಲಿ ನಾವು ಬಲಹೀನರಾಗಿದ್ದರೆ, ಈ ಉದ್ದೇಶ ಲಕ್ಷ್ಯಗಳಿಸಲು ಅಲ್ಲಾಹನು ನಿಗದಿಪಡಿಸಿದ ಅತ್ಯಂತ ಕನಿಷ್ಠ ಮಟ್ಟವನ್ನು ತಲಪಲು ಸಹ ನಮಗೆ ಸಾಧ್ಯವಾಗುವುದಿಲ್ಲವಾದರೆ, ನಾವು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಅಲ್ಲಾಹನ ಆಜ್ಞೆಗಳ ಪ್ರಕಾರ ವರ್ತಿಸಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕರೆಗೆ ಓಗೊಟ್ಟು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ ಎಂದು ಹೇಗೆ ತಾನೆ ವಾದಿಸಲು ಸಾಧ್ಯ?

ಪ್ರತಿಯೊಬ್ಬ ಬುದ್ಧಿಯುಳ್ಳ ಪ್ರಾಪ್ತ ವಯಸ್ಕನಾದ ಪುರುಷನ ಮೇಲೆ ಬಾಜಮಾಅತ್ ನಮಾಝ್ ಕಡ್ಡಾಯವಾಗಿದೆ. ಆದರೆ ಇದರ ಬಗ್ಗೆ ಪೂರ್ಣ ಶ್ರದ್ಧೆ ನೀಡಲಾಗುತ್ತಿಲ್ಲ ಎಂದು ನಾವು ಕಾಣುತ್ತೇವೆ. ಈ ವಿಷಯಕ್ಕೆ ಸಂಬಂಧಿಸಿ ಬಲಹೀನತೆ ಇದೆ. ನಿಸ್ಸಂಶಯವಾಗಿಯೂ ಒಬ್ಬ ನೈಜ ಸತ್ಯವಿಶ್ವಾಸಿ ಬಾಜಮಾಅತ್ ನಮಾಝ್ ಅನುಷ್ಠಿಸುವುದು ಫರ್ಝ್ ಆಗಿದೆ. ಅದರ ಬಗ್ಗೆ ಅವನು ಸ್ವತಃ ಗಮನವಿರಿಸಬೇಕಾದುದು ಆವಶ್ಯಕವಾಗಿದೆ. ಆದರೆ ಜಮಾಅತ್‌ನಲ್ಲಿ ಒಂದು ನಿಝಾಮ್ (ಆಡಳಿತೆ ವ್ಯವಸ್ಥೆ) ಇದೆ. ಈ ನಿಝಾಮ್ ಸಹ ಇದರ ಬಗ್ಗೆ ಗಮನ ಹರಿಸುತ್ತಾ ಇರಬೇಕು. ಅದರ ಮಹತ್ವದ ಬಗ್ಗೆ ವಿವರಿಸುತ್ತಾ ಇರಬೇಕು. ನಾನು ನನ್ನ ಹಲವಾರು ಖುತ್‌ಬಗಳಲ್ಲಿ ಇದರ ಬಗ್ಗೆ ಗಮನ ಹರಿಸುತ್ತಾ ಇದ್ದೇನೆ. ಅದನ್ನು ಮುಂದುವರಿಸುವುದು ಮುರಬ್ಬಿಗಳು ಮತ್ತು ಜಮಾಅತಿನ ನಿಝಾಮ್ ಮಾಡಬೇಕಾದ ಕೆಲಸವಾಗಿದೆ. ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಗೆ ನಮಾಝಿನ ಮಹತ್ವದ ಬಗ್ಗೆ ಪದೇ ಪದೇ ಸಂದೇಶ ತಲಪಿಸುತ್ತಾ ಇರಬೇಕು. ನಾವು ನಮ್ಮ ನಮಾಝ್‌ಗಳನ್ನು ಸಂರಕ್ಷಿಸುತ್ತಾ ಅವುಗಳಿಂದ ಆಧ್ಯಾತ್ಮಿಕ ರಸಾನುಭೂತಿ ಅನುಭವಿಸುತ್ತಾ ಇದ್ದರೆ ಮಾತ್ರ ನಾವು ವಾಸ್ತವಿಕ ಅಹ್ಮದಿಯಾಗಲು ಸಾಧ್ಯವಾಗುವುದು. ನಾವು ನಮಾಝ್‌ನಿಂದ ಆಧ್ಯಾತ್ಮಿಕ ಸಂತೋಷ ಮತ್ತು ರಸಾನುಭೂತಿ ಪಡೆಯಲು ಪ್ರಾರಂಭಿಸುವುದಾದರೆ ನಮಾಝ್‌ಗಳನ್ನು ಅನುಷ್ಠಿಸುವ ಬಗ್ಗೆ ನಮ್ಮಲ್ಲಿ ತಾನಾಗಿಯೇ ಆಸಕ್ತಿ ಸೃಷ್ಟಿಸಲ್ಪಡುವುದು.

ನಮಾಝ್ ನಿಮ್ಮನ್ನು ಕೆಡುಕುಗಳಿಂದ ರಕ್ಷಿಸುತ್ತದೆ ಎಂದು ಅಲ್ಲಾಹನು ಹೇಳಿರುವುದು ಖಂಡಿತವಾಗಿಯೂ ಸತ್ಯವಾಗಿದೆ. ಅಲ್ಲಾಹನ ವಚನ ಎಂದೂ ಸುಳ್ಳಾಗಲಾರದು. ಆದರೆ ಯಾವ ಜನರಲ್ಲಿ ಅವರು ನಮಾಝ್ ಅನುಷ್ಠಿಸುವವರಾಗಿದ್ದರೂ ಅವರಲ್ಲಿ ಕೆಡುಕುಗಳು ಬಾಕಿಯುಳಿವುದಾದರೆ, ಅದಕ್ಕೆ ಕಾರಣ ಅವರ ನಮಾಝ್‌ಗಳು ಕೇವಲ ಬಾಹ್ಯಾಚರಣೆ ಮಾತ್ರವಾಗುತ್ತದೆ. ಅವರು ನಮಾಝಿನ ಆತ್ಮವನ್ನು ಅರಿತಿರುವುದಿಲ್ಲ. ಆದುದರಿಂದ ಇದು ಅತ್ಯಂತ ಚಿಂತಾರ್ಹವಾದ ವಿಷಯವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನು ಇದರ ಬಗ್ಗೆ ತನ್ನನ್ನು ಪರಿಶೋಧಿಸಬೇಕಾಗಿದೆ.

ಕೆಲವು ಜಮಾಅತ್‌ಗಳಲ್ಲಿ ಬಾಜಮಾಅತ್ ನಮಾಝ್ ಅನುಷ್ಠಿಸುವವರ ಸಂಖ್ಯೆ ಹೆಚ್ಚಿಗೆ ಇರುತ್ತದೆ. ಹೀಗಿದ್ದರೂ ಯಾವುದಾದರೊಂದು ನಮಾಝ್ ಯಾರಾದರೊಬ್ಬನಿಗೆ ನಷ್ಟವಾಗುತ್ತಾ ಇರುತ್ತದೆ. ಕೆಲವರು ಹೇಗಿದ್ದಾರೆಂದರೆ ಅವರು ಕೆಲವು ಸಾರಿ ಒಂದು ನಮಾಝ್ ಸಹ ಅನುಷ್ಠಿಸುವುದಿಲ್ಲ. ಇದಕ್ಕೆ ಒಂದು ಕಾರಣ ಇದು ಸಹ ಆಗಿದೆ, ಅದೇನೆಂದರೆ

ಜಮಾಅತಿನ ನಿಝಾಮ್, ನಮಾಝ್ ಬಗ್ಗೆ ಗಮನ ಹರಿಸುವುದಿಲ್ಲ. ನನ್ನ ಖುತುಬಗಳನ್ನು ಪ್ರತಿಯೊಬ್ಬನು ಆಲಿಸುವುದಿಲ್ಲ. ನನ್ನ ಖುತ್‌ಬಗಳನ್ನು ಶೇಕಡ ನೂರರಷ್ಟು ಜನರು ಆಲಿಸುತ್ತಾರೆನ್ನುವುದು ತಪ್ಪಾಗಿದೆ. ಜನರು ಆಲಿಸಿದರೂ ನಿಝಾಮ್ ಜಮಾಅತ್ ನಿರಂತರವಾಗಿ ಅದರ ಬಗ್ಗೆ ನೆನಪಿಸುತ್ತಾ ಇರಬೇಕಾದುದು ಅದರ ಕೆಲಸವಾಗಿದೆ. ಜಮಾಅತ್‌ಗೆ ತರ್‌ಬಿಯತ್ ನೀಡಲಿಕ್ಕಾಗಿ ನಿಝಾಮ್ ಸ್ಥಾಪಿಸಲಾಗಿದೆ. ಕೆಲವು ದಿನಗಳ ಹಿಂದೆ ಒಂದು ಜಮಾಅತಿನ ಮಜ್ಲಿಸೆ ಆಮಿಲದ ಸದಸ್ಯರು ನನ್ನನ್ನು ಭೇಟಿಯಾದರು. ಆಗ ಆ ಜಮಾಅತಿನ ಸದರ್ ಸಾಹಿಬರು ಹೇಳಿದರು: ನಾನು ಸದರ್ ಆದ ನಂತರ ಜಮಾಅತಿನ ಆರ್ಥಿಕ ವ್ಯವಸ್ಥೆ ಬಗ್ಗೆ ಬಹಳ ಶ್ರದ್ಧೆ ನೀಡಿದೆ. ನಾವು ಇದಕ್ಕೆ ಸಂಬಂಧಿಸಿ ಬಹಳ ವೇಗವಾಗಿ ಮುಂದೆ ಸಾಗುತ್ತಿದ್ದೇವೆ ಎಂದು ಹೇಳಿದರು. ನಾನು ಅವರೊಂದಿಗೆ ಹೇಳಿದೆ: ನೀವು ಮಾಡಿದ ಪ್ರಯತ್ನವೇನೋ ಸರಿಯಾಗಿದೆ. ಆದರೆ ಒಬ್ಬ ಸತ್ಯವಿಶ್ವಾಸಿಯ ಮೂಲಭೂತ ಕಡ್ಡಾಯ ಕರ್ತವ್ಯ ನಮಾಝ್ ಅನುಷ್ಠಿಸುವುದಾಗಿದೆ. ಅದರ ಬಗ್ಗೆ ತಾವು ಮಾಡಿದ ಪ್ರಯತ್ನವೇನು? ಅದರ ಬಗ್ಗೆ ಅವರು ಮೌನವಾಗಿದ್ದರು. ಫಜರ್ ಮತ್ತು ಇಶಾ ನಮಾಝ್ ಅನುಷ್ಠಿಸಲು ಮಸ್‌ಜಿದ್‌ಗೆ ಬರುವವರ ಬಗ್ಗೆ ನಾನು ವಿಚಾರಿಸಿದಾಗ ಮತ್ತು ಪರಿಶೋಧಿಸಿದಾಗ ಆ ನಮಾಝ್‌ಗಳಿಗೆ ಆಗಮಿಸುವವರ ಸಂಖ್ಯೆ ಸಾಕಷ್ಟು ಉತ್ತಮವಾಗಿತ್ತು. ಆದರೆ ಇದರಲ್ಲಿ ನಿಝಾಮಿನ ಪ್ರಯತ್ನ ಏನೂ ಇರಲಿಲ್ಲ. ನಮಾಝ್‌ನಲ್ಲಿ ಅಭಿರುಚಿ ಮತ್ತು ಸಂತೋಷಪಡುವ ನಮಾಝಿಗಳು ಹುಟ್ಟುವುದಾದರೆ ಜಮಾಅತಿನ ಸಾಂಪತ್ತಿಕ ಸ್ಥಿತಿ ತಾನಾಗಿಯೇ ಸರಿಯಾಗುವುದು. ಏಕೆಂದರೆ ತಖ್ವದ ಮಟ್ಟ ವರ್ಧಿಸುವಾಗ ಮಾತ್ರವೇ ಆರ್ಥಿಕ ತ್ಯಾಗದ ಬಗ್ಗೆ ಗಮನ ಹರಿಸಲ್ಪಡುತ್ತದೆ. ಅದಲ್ಲದೆ ಇದರಿಂದ **ಉಮೂರೆ ಆಮ್ಮಾ** ಅಂದರೆ, ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಮತ್ತು **ಖಝಾ** (ವ್ಯಾಜ್ಯಗಳಿಗೆ) ಸಂಬಂಧಿಸಿದ ಸಮಸ್ಯೆಗಳೂ ಬಹಳ ಮಟ್ಟಿಗೆ ಪರಿಹರಿಸಲ್ಪಡುವುವು. ಉಳಿದ ವಿಭಾಗಗಳು ಸಹ ಸಕ್ರಿಯವಾಗುವುವು. ಎಲ್ಲರೂ ಸರಿಯಾಗಿ ನಮಾಝ್ ಅನುಷ್ಠಿಸುವವರಾದರೆ ಉಳಿದ ಎಲ್ಲವೂ ತಾನಾಗಿಯೇ ಸರಿಯಾಗುವುದು. ಲೋಕದ ಇಂದಿನ ಸ್ಥಿತಿ ಹೇಗಿದೆ ಎಂದರೆ ಯುದ್ಧ ಮತ್ತು ವಿನಾಶದ ಅಪಾಯ ಬಹಳ ವೇಗವಾಗಿ ವರ್ಧಿಸುತ್ತಾ ಇದೆ. ಯುದ್ಧ ಪ್ರಾರಂಭವಾದರೆ ಏನಾಗುವುದು? ನಾವು ಏನು ಮಾಡಬೇಕು ಎಂದು ಬಹಳ ಜನರು ಬರೆಯುತ್ತಿದ್ದಾರೆ. ಅವರಿಗೆಲ್ಲಾ ಇರುವ ಉತ್ತರ ಹೀಗಿದೆ: ಈ ಎಲ್ಲ ಅಪಾಯಗಳಿಂದ ರಕ್ಷಣೆ ಪಡೆಯಬೇಕಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಮಹೋನ್ನತನಾದ ಅಲ್ಲಾಹನನ್ನು ಪ್ರೀತಿಸಬೇಕು. ಅವನನ್ನು ಪ್ರೀತಿಸುವ ಮಾರ್ಗವೇನೆಂದರೆ ನಮ್ಮ ನಮಾಝ್‌ಗಳನ್ನೂ ನಮ್ಮ ಇಬಾದತ್‌ಗಳನ್ನೂ ಅಲ್ಲಾಹನ ಆಜ್ಞೆ ಪ್ರಕಾರ ಅನುಷ್ಠಿಸುತ್ತಾ ಅವುಗಳಿಂದ ರಸಾನುಭೂತಿ ಮತ್ತು ಸಂತೋಷ ಪಡೆಯಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: 'ನೀವು ಚೆನ್ನಾಗಿ ನೆನಪಿಡಿರಿ, ಪುನಃ ನೆನಪಿಟ್ಟುಕೊಳ್ಳಿರಿ, ಅಲ್ಲಾಹನ ಹೊರತು ಅನ್ಯನ ಕಡೆಗೆ ಬಾಗುವುದು ಅಲ್ಲಾಹನಿಂದ ಸಂಬಂಧ ಕಡಿದು ಹಾಕುವ ಹಾಗಿದೆ. ತೌಹೀದ್‌ನ ಪ್ರಾಯೋಗಿಕ ರೂಪವೇ ನಮಾಝ್ ಆಗಿದೆ. ನಮಾಝ್‌ನಲ್ಲಿ ವಿನಯಾನ್ವಿತ ಸ್ಥಿತಿ ಮತ್ತು ಹೃದಯ ಪರಿಶುದ್ಧಿ ಸೇರದಿದ್ದರೆ ಆ ನಮಾಝ್ ಅನುಗ್ರಹ ಹೀನವಾಗುತ್ತದೆ. **ಉದ್‌ಊನೀ ಅಸ್ತಜಿಬ್ ಲಕುಂ** ನನ್ನನ್ನು ಕರೆಯಿರಿ ನಾನು ಉತ್ತರ ನೀಡುವೆನು ಎಂಬ ಅಲ್ಲಾಹನ ವಚನ ಈಡೇರಲು ಮನುಷ್ಯನಲ್ಲಿ ಸತ್ಯವಾದ ಆತ್ಮವಿರಬೇಕಾದುದು ಆವಶ್ಯಕವಾಗಿದೆ. ವಿನಯ ಮತ್ತು ಭಯದಲ್ಲಿ ವಾಸ್ತವಿಕತೆ ಇಲ್ಲವಾದರೆ ಅದು ವ್ಯರ್ಥವಾಗುತ್ತದೆ.'

ಆದುದರಿಂದ ನಾನು ಯಾವಾಗಲೂ ಹೇಳುತ್ತಿರುವ ಹಾಗೆ ಪ್ರಾರ್ಥನೆ ಮಾಡುವಾಗ ವಿನಯ ಮತ್ತು ಹೃದಯಾರ್ದ್ರತೆ ಇದ್ದರೆ ಅಲ್ಲಾಹನು ಪ್ರಾರ್ಥನೆ ಅಂಗೀಕರಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ಮನುಷ್ಯನ ಆತ್ಮ ಸಂಪೂರ್ಣವಾಗಿ ಅಸ್ತಿತ್ವ ರಹಿತವಾಗುವಾಗ ಅದು ಅಲ್ಲಾಹನ ಕಡೆಗೆ ಒಂದು ನೀರ ಝರಿಯ ಹಾಗೆ ಹರಿಯುತ್ತದೆ. ಆಗ ಅಲ್ಲಾಹನ ಹೊರತು ಉಳಿದ ಎಲ್ಲವುಗಳೊಂದಿಗೆ ಅವರ ಸಂಬಂಧ ಸಂಪೂರ್ಣವಾಗಿ ಮುರಿದು ಹೋಗುತ್ತದೆ. ಆಗ ಅಲ್ಲಾಹನ ಪ್ರೀತಿ ಅವರ ಮೇಲೆ ಸುರಿಯುತ್ತದೆ.'

ಅಲ್ಲಾಹನ ಪ್ರೀತಿ ಮನುಷ್ಯನ ಮೇಲೆ ಸುರಿಯುವಾಗ ಅವನ ಪಾಪದೋಷಗಳು ಸುಡಲ್ಪಟ್ಟು ಇಲ್ಲವಾಗುತ್ತವೆ. ಆಗ ಸ್ಥಿರವಾಗಿ ನಮಾಝ್ ಅನುಷ್ಠಿಸುವುದರಲ್ಲಿ ಅಭಿರುಚಿ ತಲೆದೋರುತ್ತದೆ. ಆದುದರಿಂದ, ನಮ್ಮ ನಮಾಝ್‌ಗಳು ನಮಗೆ ಸಂತೋಷ ನೀಡುವುದಿಲ್ಲ ಎಂದು ದೂರುವುದಕ್ಕೆ ಬದಲಾಗಿ ಮತ್ತು ಹಾಗೆ ಯೋಚಿಸುವುದಕ್ಕೆ ಬದಲಾಗಿ ನಾವು ಅಲ್ಲಾಹನೊಂದಿಗೆ ವಿಶಿಷ್ಟ ಸಂಬಂಧ ಸ್ಥಾಪಿಸಲು ಪ್ರಯತ್ನಿಸಬೇಕಾಗಿದೆ. ನಾವು ನಮ್ಮ ಸ್ಥಿತಿಯನ್ನು ನೋಡಬೇಕು. ನಾವು ಕೇವಲ ಅಂಗವಿನ್ಯಾಸ ಮಾಡುತ್ತಿರುವೆವೋ ಅಥವಾ ನಮಾಝ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಸರಿಯಾಗಿ ಈಡೇರಿಸುತ್ತಾ ಇದ್ದೇವೋ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ನಮಾಝುನ್ನು ಕ್ರಮ ಬದ್ಧವಾಗಿ ಅನುಷ್ಠಿಸುವುದು ಆವಶ್ಯಕವಾಗಿದೆ. ಅದೊಂದು ಸ್ಥಿರ ಅಭ್ಯಾಸವಾಗಬೇಕು. ಅಲ್ಲಾಹನ ಕಡೆಗೆ ತಿರುಗುವ ಯೋಚನೆ ಇರಬೇಕು. ಅನಂತರ ಕ್ರಮೇಣ ಎಂತಹ ಸ್ಥಿತಿ ಉಂಟಾಗುತ್ತದೆ ಎಂದರೆ ಮನುಷ್ಯನು ಅಲ್ಲಾಹನ ಹೊರತು ಎಲ್ಲರೊಂದಿಗೆ ಸಂಬಂಧವನ್ನು ಕಡಿದುಕೊಂಡು ಪ್ರಕಾಶ ಮತ್ತು ಒಂದು ರಸಾನುಭೂತಿಯ ವಾರೀಸುದಾರನಾಗುತ್ತಾನೆ.'

ಒಟ್ಟಿನಲ್ಲಿ, ಮೊತ್ತಮೊದಲು ನಮಾಝ್ ಅನುಷ್ಠಿಸುವ ಅಭ್ಯಾಸ ಆವಶ್ಯಕವಾಗಿದೆ. ನಮ್ಮನ್ನು ನಮಾಝ್ ಅನುಷ್ಠಿಸಲು ಬದ್ಧರನ್ನಾಗಿ ಮಾಡುವುದು ಆವಶ್ಯಕವಾಗಿದೆ. ನಮಾಝ್ ಅನುಷ್ಠಾನದ ಪ್ರಯೋಜನ ಕಂಡರೂ ಕಾಣದಿದ್ದರೂ ನಮಾಝ್ ಅನುಷ್ಠಿಸಲೇಬೇಕು. ಏಕೆಂದರೆ ಇದು ಅಲ್ಲಾಹನಿಂದ ಕಡ್ಡಾಯ ಗೊಳಿಸಲಾದುದಾಗಿದೆ.

ನಾನು ಪ್ರತಿಯೊಂದು ಸ್ಥಿತಿಯಲ್ಲಿ ಅಲ್ಲಾಹನ ಕಡೆಗೆಯೇ ತಿರುಗಬೇಕು, ಅವನ ಕಡೆಗೆಯೇ ಪ್ರತಿಯೊಂದು ಆವಶ್ಯಕತೆ ಈಡೇರಿಸಲು ಹೋಗಬೇಕಾಗಿದೆ, ಅವನಿಂದಲೇ ಬೇಡಿಕೊಳ್ಳಬೇಕಾಗಿದೆ ಎಂದು ಯೋಚಿಸಬೇಕು. ಈ ರೀತಿ ಸ್ಥಿರತೆಯಿಂದ ನಮಾಝ್ ಅನುಷ್ಠಿಸುವುದಾದರೆ ಆಗ ನಮಾಝ್‌ಗೆ ಸಂಬಂಧಿಸಿದ ಹಕ್ಕುಗಳು ಈಡೇರಿಸಲ್ಪಡುವ ಕಾಲವು ಪ್ರಾರಂಭವಾಗುವುದು. ನಮಾಝ್‌ನಲ್ಲಿ ರಸಾನುಭೂತಿ ಸಹ ಉಂಟಾಗಲು ಪ್ರಾರಂಭವಾಗುವುದು.

ಅಲ್ಲಾಹನು ನಮಗೆ ನಮಾಝುನ್ನು ಸರಿಯಾದ ರೀತಿಯಲ್ಲಿ ಸಂರಕ್ಷಿಸುವ ಭಾಗ್ಯ ದಯಪಾಲಿಸಲಿ. ಅವುಗಳನ್ನು ಕ್ರಮಬದ್ಧವಾಗಿ ಅನುಷ್ಠಿಸುವ ಭಾಗ್ಯ ಅವನು ನಮಗೆ ನೀಡಲಿ. ಅಲ್ಲಾಹನ ಸಂಪ್ರೀತಿ ಗಳಿಸುವ ಉದ್ದೇಶದಿಂದ ನಾವು ನಮಾಝ್ ಅನುಷ್ಠಿಸುವ ಭಾಗ್ಯ ಅವನು ನಮಗೆ ನೀಡಲಿ. ನಮ್ಮ ನಮಾಝ್‌ಗಳಲ್ಲಿ ರಸಾನುಭೂತಿ ಮತ್ತು ಸಂತೋಷವನ್ನು ಅಲ್ಲಾಹನು ಹುಟ್ಟಿಸಲಿ. ನಾವು ನಮಾಝ್ ಬಗ್ಗೆ ಎಂದೂ ಉದಾಸೀನರಾಗದಂತೆ ಅವನು ಮಾಡಲಿ. ನಾವು ಅಲ್ಲಾಹನನ್ನು ಆರಾಧಿಸುವ ಹಕ್ಕುಗಳನ್ನು ಈಡೇರಿಸುವಾಗ ಮಾತ್ರ ಲೋಕದ ವಿಪತ್ತುಗಳಿಂದಲೂ ಕಷ್ಟಗಳಿಂದಲೂ ಸಂರಕ್ಷಣೆ ಪಡೆಯುವೆವು ಎಂದು ಮನವರಿಕೆ ಮಾಡಿಕೊಳ್ಳುವವರಾಗೋಣ. ಅಲ್ಲಾಹನು ನಮಗೆ ಹಾಗೆ ಮಾಡಲು ಭಾಗ್ಯ ದಯಪಾಲಿಸಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 20-01-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon